ದಿನಾಂಕಃ **05-01-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಮಾನ್ಯ ಶ್ರೀ.ಎಂ ಎಂ ಪಿ ವಕೀಲರಿಂದಃ**

**1** ನೇ ಪ್ರತಿವಾದಿ ಮಾಡಿಕೊಂಡ ಕರಾರು ಎಷ್ಟು ರೂಪಾಯಿಗಳ ಸ್ಟಾಂಪ್ ಪೇಪರ್ ಗಳ ಮೇಲೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸ್ಟಾಂಪ್ ಪೇಪರ್ ಗಳನ್ನು ನನ್ನ ಚಿಕ್ಕಪ್ಪ ತಂದಿರುತ್ತಾರೆ. ನಾನು ಸದರಿ ಪತ್ರವನ್ನು ಎಷ್ಟು ರೂಪಾಯಿ, ಏನು ಎಂದು ನೋಡಿರುವುದಿಲ್ಲ. ಯಾರ ಹೆಸರಿನಲ್ಲಿ ಸದರಿ ಸ್ಟಾಂಪ್ ಪೇಪರ್ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕರಾರು ಆದಾಗ ಸಮಯ ಸುಮಾರು ಬೆಳಿಗ್ಗೆ **11.30** ಗಂಟೆ ಆಗಿರುತ್ತದೆ, **20** ವರ್ಷಗಳು ಆದ ಕಾರಣ ದಿನಾಂಕ ನನಗೆ ನೆನಪಿಲ್ಲ. ಕರಾರನ್ನು ತಯಾರಿಸಲು ಅರ್ಧ ಗಂಟೆ ಆಗಿರುತ್ತದೆ. ರೂ **2800** ರೂಗಳನ್ನು ನೀಡಿರುತ್ತೇವೆ **1000** ಮುಖ ಬೆಲೆಯ **2** ನೋಟು ಮತ್ತು **500** ಮುಖಬೆಲೆಯ **1** ನೋಟು **100** ಮುಖಬೆಲೆಯ **3** ನೋಟನ್ನು ನೀಡಿರುತ್ತೆವೆ. ಕರಾರಿಗೆ ಮೊದಲು ನನ್ನ ಚಿಕ್ಕಪ್ಪ ಸಹಿ ಮಾಡಿರುತ್ತಾರೆ. ಅವರ ನಂತರ ಸಾಕ್ಷಿಗಳು ಸಹಿ ಮಾಡಿರುತ್ತಾರೆ. ಬರವಣಿಗೆ ಆದ ನಂತರ ಕರಾರಿಗೆ ಸಹಿ ಮಾಡಿರುತ್ತಾರೆ. ನಾನು ಆ ಪತ್ರವನ್ನೂ ಓದಿರುವುದಿಲ್ಲ, ಏಕೆಂದರೆ ನನಗೆ ಓದುವುದಕ್ಕೆ ಬರುವುದಿಲ್ಲ.

**20** ವರ್ಷಗಳ ಹಿಂದೆ ಕರಾರು ಆದ ವಿಚಾರ ಸುಳ್ಳು, ನಮ್ಮ ಚಿಕ್ಕಪ್ಪ ಯಾವುದೇ ಸ್ಟಾಂಪ್ ಪೇಪರ್ ಗಳನ್ನು ತಂದಿರುವುದಿಲ್ಲ ಮತ್ತು ಅವರಿಗೆ ಹಣದ ಯಾವುದೇ ಅವಶ್ಯಕತೆ ಸದರಿ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಹಶೀಲ್ದಾರರ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿತ್ತು ಎಂದರೆ ಸರಿ. ತಹಶೀಲ್ದಾರರ ನ್ಯಾಯಾಲಯದಲ್ಲಿ ದಾವಾ ಸ್ವತ್ತು **1** ನೇ ಪ್ರತಿವಾದಿಗೆ ಸೇರಬೇಕು ನನಗೆ ಯಾವುದೇ ಹಕ್ಕು ಇಲ್ಲ ಎಂದು ವಜಾ ಆಗಿರುತ್ತದೆ, **1** ನೇ ಪ್ರತಿವಾದಿಯ ಗಂಡ ಕರಾರು ಬರೆದುಕೊಟ್ಟಿರುತ್ತಾರೆ. **1** ನೇ ಪ್ರತಿವಾದಿ ಈಗಲೂ ಸಹ ದಾವಾ ಸ್ವತ್ತಿನ ಸ್ವಾದೀನದಲ್ಲಿದ್ದು ಭತ್ತ , ಕಬ್ಬು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ, ನಾನು ಭತ್ತ ಬೆಳೆಯುತ್ತಿದ್ದೆನೆ. ಕರಾರಿನ ಸಮಯದಿಂದಲೂ ನಾವೇ ಅನುಭವದಲ್ಲಿ ಇದ್ದೇವೆ. ಪ್ರತಿವಾದಿಗಳು ನಾವು ವಿನಃ ಕಾರಣ ತೊಂದರೆ ಕೊಡುತ್ತಿದ್ದೇವೆ ಎಂದು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ಸರಿ, ಆದರೆ ನಮ್ಮ ಸ್ವಾಧೀನವನ್ನು ಒಪ್ಪಿಕೊಂಡಿರುತ್ತಾರೆ. ನನ್ನ ತಂದೆ ಹಾಗೂ ಅವರ ಕುಟುಂಬದಲ್ಲಿ ವಿಭಾಗ ಆದಾಗಿನಿಂದಲೂ ನಮಗೂ ಹಾಗು ಪ್ರತಿವಾದಿಗಳಿಗೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸಾಧ್ಯವಾದರೆ ಆಸ್ತಿಯನ್ನು ಲಪಾಟಯಿಸುವ ಉದ್ದೇಶದಿಂದ ಸುಳ್ಳು ಕರಾರನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಕರಾರು ಪತ್ರದ ಸಾಕ್ಷಿದಾರರ ನಮ್ಮ

ಕಡೆಯವರು ಅವರೊಂದಿಗೆ ಶಾಮೀಲಾಗಿ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ